**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 18 ಪ್ರಾ.ಸಾ. : 10**

ಸಾಕ್ಷಿಯ ಹೆಸರು : ಮಾರಿಯಾ
ತಂದೆಯ ಹೆಸರು : ಕನ್ನಾ ನಾಯ್ಕ
ವಯಸ್ಸು : 62 ವರ್ಷ
ಉದ್ಯೋಗ : ಕೂಲಿ
ವಾಸ : ಕಾನಗೋಡು ಸಿದ್ದಾಪುರ ತಾಲೂಕು

**ದಿನಾಂಕಃ 16-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ ಹುಟ್ಟಿರುತ್ತೇನೆ. ಅಲ್ಲಿಯೇ ಆಗಿನಿಂದ ವಾಸ ಇದ್ದೇನೆ. 2001-02 ನೇ ಸಾಲಿನ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಇದ್ದ ಯೋಜನೆಯಲ್ಲಿ ನಾನು ಫಲಾನುಭವಿ ಆಗಿದ್ದೇನು ಎಂದು ನನಗೆ ಗೊತ್ತಿಲ್ಲ . ನನ್ನ ಹೆಸರು ಫಲಾನುಭವಿ ಪಟ್ಟಿಯಲ್ಲಿ ಇತ್ತೋ ಎನ್ನುವುದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ನನಗೆ ಕಾನಗೋಡು ಗ್ರಾಮ ಪಂಚಾಯತಿಯಿಂದ ರೂ. 3000/- ವನ್ನು ಕೊಟ್ಟಿರುವುದಿಲ್ಲ. ನಾನು ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿಲ್ಲ . ನನ್ನನ್ನು ಪೊಲೀಸ್ ನವರು ಭೇಟಿ ಮಾಡಿಲ್ಲ ವಿಚಾರಣೆ ಮಾಡಿಲ್ಲ . ನನ್ನ ಗ್ರಾಮದಲ್ಲಿ ಮಾರಿಯಾ ಕನ್ನಾ ನಾಯ್ಕ ಎನ್ನುವ ಹೆಸರಿನವರು ನನ್ನ ಜಾತಿಯವರೇ ಇನ್ನೂ ಇಬ್ಬರು ನನ್ನ ಊರಿನಲ್ಲಿ ಇದ್ದಾರೆ . ಅವರು ಸ್ವಚ್ಛ ಗ್ರಾಮ ಯೋಜನೆಯ ಅಡಿಯಲ್ಲಿ ಶೌಚಾಲಯ ನಿರ್ಮಾಣದ ಫಲಾನುಭವಿಗಳು ಆಗಿದ್ದಾರೆಯೇ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದೆ .

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. 2001-02 ನೇ ಸಾಲಿನ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಕಾನಗೋಡು ಗ್ರಾಮಕ್ಕೆ ರೂ. 20,00,000/- ಮಂಜೂರು ಆಗಿತ್ತು ಎಂದರೆ ಯೋಜನೆ ಮಂಜೂರಾಗಿತ್ತು ಆದರೆ ಎಷ್ಟು ಮೊತ್ತ ಎಂದು ನನಗೆ ಗೊತ್ತಿಲ್ಲ. ಆ ಯೋಜನೆಯಲ್ಲಿ ನಮ್ಮ ಗ್ರಾಮದಲ್ಲಿ 210 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು ಎಂದರೆ ಹೌದು . ಸದರಿ ಫಲಾನುಭವಿಗಳ ಪಟ್ಟಿಯಲ್ಲಿ ನನ್ನ ಹೆಸರು ಸಹ ಇತ್ತು ಎಂದರೆ ಹೌದು . ಅದರಲ್ಲಿ ಪ್ರತಿ ಫಲಾನುಭವಿಗೆ ಗ್ರಾಮ ಪಂಚಾಯತಿಯಿಂದ ತಲಾ ರೂ. 3000/- ಕೊಡಬೇಕಾಗಿತ್ತು ಎಂದರೆ ಹೌದು . ನನಗೆ ರೂ. 3000/- ಅನ್ನು ಪಾವತಿ ಮಾಡಿರುವುದಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಆರೋಪಿ ನನ್ನ ದಾಯಾದಿ ತಮ್ಮ ಆಗಿರುತ್ತಾನೆ . ಅವನಿಗೆ ತ್ರಾಸ ಆಗುವುದು ಬೇಡ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರು ಗೈರು ಹಾಜರು ಇದ್ದಾರೆ. ಅವರ ಪರ ಎಸ್ ಜಿ ಎನ್ ವಕೀಲರು ಸಮಯ ಕೋರಿದ್ದಾರೆ . ಸಾಕ್ಷಿಗೆ ರೂ. 500/- ಭತ್ಯೆ ಪಾವತಿ ಮಾಡಲು ನಿರ್ದೇಶನ ನೀಡಲಾಗಿದೆ . ಭತ್ಯೆ ಪಾವತಿ ಮಾಡಿರುವುದಿಲ್ಲ. ಆದ್ದರಿಂದ ಸಮಯಾವಕಾಶ ಕೋರಿರುವುದನ್ನು ನಿರಾಕರಿಸಲಾಗಿದೆ . ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ